11 ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡದಲ್ಲಿದ್ದು, ಇವುಗಳಲ್ಲಿ 9 ವಿದ್ಯಾರ್ಥಿ ನಿಲಯಗಳು ಹಳೆಯ ಕಟ್ಟಡದಲ್ಲಿರುತ್ತವೆ.

ಆ) ಹೌದು.

ಇ) ಹೌದು.

ಈ) 2013–14ನೇ ಸಾಲಿನಲ್ಲಿ ಜೇವರ್ಗಿ ತಾಲ್ಲೂಕಿನ 5 ವಿದ್ಯಾರ್ಥಿ ನಿಲಯಗಳಲ್ಲಿ 8 ಹೆಚ್ಚುವರಿ ವಾಸದ ಕೊಠಡಿ. 12 ಶೌಚಾಲಯ ಮತ್ತು 12 ಸ್ನಾನ ಗೃಹಗಳ ನಿರ್ಮಾಣ ಮಾಡಲು ಒಟ್ಟು ₹ 124.70 ಲಕ್ಷಗಳಿಗೆ ಪ್ರಸ್ತಾವನೆಯನ್ನು ಸ್ವೀಕರಿಸಲಾಗಿದ್ದು, ಪರಿಶೀಲನೆಯ ಹಂತದಲ್ಲಿರುತ್ತದೆ. ಕಾಮಗಾರಿಗಳ ಅಗತ್ಯತೆಗಳನ್ನು ಪರಿಗಣಿಸಿ ಅನುದಾನದ ಬಿಡುಗಡೆಗೆ ಕ್ರಮವಹಿಸಲಾಗುವುದು.

ಸಾರ್ವಜನಿಕರಿಗೆ ಸಮರ್ಪಕ ಬಸ್ಸಿನ ಸೇವೆ

859(942); ಡಾ॥ ಅಜಯ್ ಸಿಂಗ್ (ಜೇವರ್ಗಿ)

ಅ) ಗುಲಬರ್ಗಾ ಜಿಲ್ಲೆಯಲ್ಲಿ ಖಾಸಗಿ ವಾಹನಗಳು (ಬಸ್ಸುಗಳು) ಸಂಚಾರ ಸ್ಥಗಿತಗೊಳಿಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಬಂದಿದ್ದಲ್ಲಿ, ತದನಂತರ ಸಾರ್ವಜನಿಕರಿಗೆ ಸಮರ್ಪಕ ಬಸ್ಸುಗಳ ಸಂಚಾರದ ವ್ಯವಸ್ಥೆಯನ್ನು ಸರ್ಕಾರದಿಂದ ಕಲ್ಪಿಸಲಾಗಿದೆಯೇ:

ಇ) ಜೇವರ್ಗಿ ತಾಲ್ಲೂಕಿನಲ್ಲಿ ಬಸ್ ಸೌಕರ್ಯ ಕಡಿಮೆ ಇರುವುದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಈ) ಬಂದಿದ್ದಲ್ಲಿ, ಸಾರ್ವಜನಿಕರಿಗೆ ಹೆಚ್ಚಿನ ಸಾರಿಗೆ ಬಸ್ಸಿನ ಸೇವೆಯನ್ನು ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಬಂದಿದೆ.

ಆ) ಗುಲಬರ್ಗಾ ಜಿಲ್ಲೆಯಲ್ಲಿ ಖಾಸಗಿ ಬಸ್‌ಗಳ ಕಾರ್ಯಾಚರಣೆ ಸ್ಥಗಿತಗೊಂಡ ನಂತರ ಹಾಲಿ ಕಾರ್ಯಾಚರಣೆಯಲ್ಲಿರುವ ಸಂಸ್ಥೆಯ ವಾಹನಗಳ ಜೊತೆಗೆ ಹೆಚ್ಚುವರಿಯಾಗಿ ಗುಲಬರ್ಗಾ–ಬೀದರ ಮಾರ್ಗದಲ್ಲಿ 12, ಗುಲಬರ್ಗಾ–ವಿಜಾಪುರ ಮಾರ್ಗದಲ್ಲಿ 20, ಗುಲಬರ್ಗಾ–ಸುರಪುರ ಮಾರ್ಗಗಳಲ್ಲಿ 12 ಹೆಚ್ಚುವರಿ ವಾಹನಗಳನ್ನು ಕಾರ್ಯಾಚರಣೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಈ ಮಾರ್ಗಗಳಲ್ಲಿ ಪ್ರತಿ 5 ರಿಂದ 10 ನಿಮಿಷಕ್ಕೊಂದರಂತೆ ಬಸ್ಸುಗಳು ಕಾರ್ಯಾಚರಣೆ ಮಾಡಿ ಪ್ರಯಾಣಿಕರಿಗೆ ವ್ಯವಸ್ಥಿತ ಮತ್ತು ಸಮರ್ಪಕ ಬಸ್ ಸೇವೆ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಜೇವರ್ಗಿ ತಾಲ್ಲೂಕಿನಲ್ಲಿ ಬರುವ 145 ಗ್ರಾಮಗಳ ಪೈಕಿ 140 ಗ್ರಾಮಗಳಿಗೆ ಬಸ್ ಸೇವೆ ಒದಗಿಸಲಾಗಿದೆ. ಅದೇ ರೀತಿ ಜೇವರ್ಗಿ ಘಟಕದಿಂದ 71 ಅನುಸೂಚಿಗಳು ಕಾರ್ಯಾಚರಣೆ ಮಾಡಲಾಗುತ್ತಿದೆ, ಇವುಗಳ ಪೈಕಿ 13 ದೂರದ ಮಾರ್ಗಗಳ ಅನುಸೂಚಿಗಳಾಗಿದ್ದು ಉಳಿದ ಅನುಸೂಚಿಗಳು ಜೇವರ್ಗಿ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳು ಮತ್ತು ಜೇವರ್ಗಿ ಪಟ್ಟಣದಿಂದ ಪ್ರಮುಖ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಇತ್ತೀಚೆಗೆ ಜೇವರ್ಗಿ ತಾಲ್ಲೂಕಿನ ಗ್ರಾಮಗಳಾದ ಯತ್ನಾಳ, ಹಂಚನಾಳ, ಐನಾಪುರ, ವರವಿ ಗ್ರಾಮಗಳಿಗೆ ಹೊಸದಾಗಿ ಸಾರಿಗೆ ಸಂಪರ್ಕ ಕಲ್ಪಿಸಲಾಗಿದೆ. ಕಳೆದ 3 ತಿಂಗಳ ಅವಧಿಯಲ್ಲಿ 4 ಹೆಚ್ಚುವರಿ ಅನುಸೂಚಿಗಳು ಜೇವರ್ಗಿ ಘಟಕಕ್ಕೆ ಅಳವಡಿಸಲಾಗಿದೆ. ಇದರಿಂದ ಜೇವರ್ಗಿ ತಾಲ್ಲೂಕಿನಲ್ಲಿ ಬಸ್ಸಿನ ಸೌಕರ್ಯ ಕೊರತೆ ಇರುವುದಿಲ್ಲ.

ಈ) ಈಗಾಗಲೇ ಜೇವರ್ಗಿ ತಾಲ್ಲೂಕಿನಲ್ಲಿ ಸಮರ್ಪಕ ಸಾರಿಗೆ ಸೇವೆ ಒದಗಿಸಲಾಗಿದ್ದು ಒಟ್ಟು 5 ಗ್ರಾಮಗಳಿಗೆ ಬಸ್ ಕಾಯಾಚರಣೆಗೆ ಸೂಕ್ತ ರಸ್ತೆ ಸಂಪರ್ಕವಿಲ್ಲದ ಕಾರಣ ಬಸ್ ಸೇವೆ ಒದಗಿಸಲಾಗಿರುವುದಿಲ್ಲ. ಈ ಗ್ರಾಮಗಳಿಗೆ ಬಸ್ ಕಾರ್ಯಾಚರಣೆಗೆ ಯೋಗ್ಯ ರಸ್ತೆ ಕಲ್ಪಿಸಿದ್ದಲ್ಲಿ ಬಸ್ ಸೇವೆ ಒದಗಿಸಲು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.